

‘ಜಗವೆಂಬ ಹಣತೆಯಲ್ಲಿ ಬದುಕೆಂಬ ಎಣ್ಣೆ ಹಾಕಿ/ ಗಂಡೆಂಬ ಬತ್ತಿಯಲ್ಲಿ ಹೆಣ್ಣೆಂಬ ಜ್ಯೋತಿ ಹಚ್ಚಿದರೆ/ ಜಗವೆಲ್ಲಾ ಬೆಳಗು...’ ಎಂದು ಹೇಳುತ್ತದೆ ಸಾ.ರಾ. ಅಬೂಬಕ್ಕರ್ ಅವರ ಒಂದು ಕವಿತೆ. ಸಮಾಜದ ಬೆಳಗಿಗೆ, ಬೆಳವಣಿಗೆಗೆ ಎರಡೂ ಲಿಂಗ ಅನಿವಾರ್ಯ. ಲಿಂಗ ಸಾಮರಸ್ಯಕ್ಕೆ ಪುರಾಣ ಪ್ರಸಿದ್ಧ ಶಿವ–ಪಾರ್ವತಿಯರ ಅರ್ಧನಾರೀಶ್ವರ ಪರಿಕಲ್ಪನೆ ನಮಗಿರುವ ಆದರ್ಶಗಳಲ್ಲಿ ಒಂದು. ಅದನ್ನೇ ಮಹಾಕಾವ್ಯ ಮಹಾಭಾರತದಲ್ಲಿ ಮತ್ತೊಂದು ರೀತಿಯಲ್ಲಿ ನೋಡಬಹುದು. ಅರ್ಜುನ ವಿರಾಟನಗರದಲ್ಲಿ ಅಜ್ಞಾತವಾಸ ಅನುಭವಿಸುತ್ತಿದ್ದಾಗ ಬೃಹನ್ನಳೆಯ ವೇಷ ಧರಿಸಿದ್ದ. ಗೋಗ್ರಹಣದಲ್ಲಿ ಪರಾಕ್ರಮ ಮೆರೆದು ಯುದ್ಧ ಗೆದ್ದುದು ತೃತೀಯಲಿಂಗಿ ಅವತಾರಿ ಅರ್ಜುನ. ಕನ್ನಡ ಪರಂಪರೆಯಲ್ಲಿ ಸರ್ವಸಮಾನತೆಯ ಆಶಯಕ್ಕೆ ಇಂದಿಗೂ ಆದರ್ಶವಾದ ಶರಣರ ಬದುಕಿನಲ್ಲಿ ಮನಸ್ಸೆಂಬ ಲಿಂಗಕ್ಕೆ ಭೇದವೇ ಇಲ್ಲ. ‘ಶರಣ ಸತಿ ಲಿಂಗಪತಿ’ ಪರಿಕಲ್ಪನೆಯ ಲಿಂಗ ಅಭೇದ ಆರಾಧನೆಗೆ ಮಾದರಿಯಾಗಿತ್ತು. ಅವರ ಆಶಯ ಎಂದೆಂದಿಗೂ ಪ್ರಸ್ತುತ ಎನ್ನುವುದಕ್ಕೆ ಮಸೀದಿ ಮತ್ತು ಅಯ್ಯಪ್ಪ ಮಂದಿರ ಪ್ರವೇಶ ಸಂಬಂಧಿ ವಿವಾದದ ಪರಿಹಾರಕ್ಕೆ ಸಾಕ್ಷೀಭೂತವಾಗುತ್ತದೆ.

ಆದಿವಚನಕಾರ ಜೇಡರ ದಾಸಿಮಯ್ಯ ತಮ್ಮ ವಚನವೊಂದರಲ್ಲಿ ‘...ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡು ಅಲ್ಲ’ ಎನ್ನುತ್ತಾರೆ. ಗಂಡು–ಹೆಣ್ಣಿನ ಭೌತಿಕ ರೂಪದಾಳದೊಳಗೆ ಮತ್ತೊಂದು ಲಿಂಗ ಇದೆ ಎನ್ನುವುದನ್ನು ದಾಸಿಮಯ್ಯ ಪ್ರತಿಪಾದಿಸಿದ್ದಾರೆ. ಇಷ್ಟೆಲ್ಲಾ ಹೇಳಿದ್ದರೂ ಗಂಡಿಗೆ ಗಂಡೂ ಅಲ್ಲದ, ಹೆಣ್ಣಿಗೆ ಹೆಣ್ಣೂ ಅಲ್ಲದ ತೃತೀಯ ಲಿಂಗಿಗಳೂ ಇದ್ದಾರೆ. ಬಯಕೆಯ ತೋಟ ಮುಳ್ಳಿನ ಬೇಲಿಯಾಗಿ ಅವರ ನವಿರಾದ ಭಾವನೆಗಳನ್ನು ಈಗಲೂ ಚುಚ್ಚುತ್ತಿದೆ.

## ಬೀದಿಗೆ ಬದ್ದಿದೆ ಬದುಕು

ಸರಕೆಲ್ಲ ಉಪಭೋಗದ ನಂತರ ತ್ಯಾಜ್ಯ ಅಷ್ಟೆ. ಕನ್ನಡ ಸಿನಿಮಾದ ಗೀತೆಯೊಂದು ‘ಬಾಡಿ ಹೋದ ಬಳ್ಳಿಯಿಂದ/ ಹೂವು ಅರಳಬಲ್ಲದೆ/ ತಂತಿ ಹರಿದ ವೀಣೆಯಿಂದ/ ನಾದ ಹರಿಯಬಲ್ಲದೆ/ ಮನಸು ಕಂಡ ಆಸೆ ಎಲ್ಲ ಕನಸಿನಂತೆ/ ಕರಗಿತಲ್ಲ ಉಲ್ಲಾಸ ಇನ್ನೆಲ್ಲಿದೆ’ ಈ ಪ್ರಶ್ನೆಗೆ ಉತ್ತರ ಸಾಧ್ಯವಿಲ್ಲ ಎಂದಷ್ಟೇ ಹೇಳಬಹುದು. ಭಾವ ತುಂಬಿದ ಬದುಕಿನಲ್ಲಿ ತಂತಿ ಹರಿದಿದೆ. ಬದುಕು ಮೆಚ್ಚಿದ ಒಪ್ಪಿತ ಲಿಂಗ ಬೀದಿಗೆ ತಂದು ನಿಲ್ಲಿಸಿದೆ. ಲೋಕ ಕಂಡ ಲಿಂಗವನ್ನು ನಿರಾಕಾರವೆಂದು ನಿರಾಕರಿಸಿ ಬೇರೊಂದು ಲಿಂಗವನ್ನು ಒಪ್ಪಿದ್ದೇ ತಪ್ಪಾಗಿದೆ ಇಲ್ಲಿ. ಅದು ಅವರ ಭಾವ ತುಂಬಿದ ಬದುಕಿನಲ್ಲಿ ಭಾವ ಶೂನ್ಯ ಆವರಿಸುವಂತೆ ಮಾಡಿದೆ. ಪ್ರೀತಿಯ ಪಸೆ ವಸರಲು ಪ್ರೀತಿಯ ಮರುಪೂರಣ ಮಾಡಬೇಕು, ಎನ್ನುವ ಕಾಳಜಿಯ ಕಣ್ಣ ಬಿಂಬ ತುಂಬಿ ಬಂದಿದೆ. ಬತ್ತಿಹೋದ ತೊರೆಯಲ್ಲೂ ಜೀವಜಲ ವಸರಲು ಬೇಕು ಮಳೆಕೊಯ್ಲು, ಜಲಪೂರ್ಣದ ಕಾಯಕಲ್ಪ. ಅಂತೆಯೇ ಬೀದಿಗೆ ಬಿದ್ದ ಬದುಕಿಗೆ ಭಾವಪೂರಣಗೊಳಿಸಿದಲ್ಲಿ ಅದರ ಕನಸೂ ಜೀವತುಂಬಿ ನವಿರಾದೀತು.

